ಜೆಎಸ್‌ಎಸ್ ಮಹಾವಿದ್ಯಾಪೀಠ

# ಜೆಎಸ್‌ಎಸ್ ಮಹಿಳಾ ಕಾಲೇಜು

ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸಂಯೋಜಿತ ಮತ್ತು ನ್ಯಾಕ್ ನಿಂದ `ಬಿ' ಮಾನ್ಯತೆ ಪಡೆದಿದೆ

**ಕೊಳ್ಳೇಗಾಲ - 571 440, ಚಾಮರಾಜನಗರ ಜಿಲ್ಲೆ**

☎: 08224-252149 🖷: 08224-256051 Email: jsscwk@gmail.com www.jsscwkgl.org

## ವರದಿ

## ನೈರ್ಮಲ್ಯಕ್ಕೂ ಆರೋಗ್ಯಕ್ಕೂ ಅವಿನಾಭಾವ ಸಂಬಂಧವಿದೆ

## ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ಸ್ವಚ್ಛತೆ ಕುರಿತ ವಿಶೇಷ ಉಪನ್ಯಾಸದಲ್ಲಿ ಶ್ರೀ ಧನಂಜಯ

ಕೊಳ್ಳೇಗಾಲ: 28-09-2018 ಉತ್ತಮ ನೈರ್ಮಲ್ಯ ವ್ಯವಸ್ಥೆಯಿದ್ದಲ್ಲಿ ಉತ್ತಮ ಆರೋಗ್ಯವೂ ಇರುತ್ತದೆ. ನೈರ್ಮಲ್ಯಕ್ಕೂ ಆರೋಗ್ಯಕ್ಕೂ ಅವಿನಾಭಾವ ಸಂಬಂಧವಿದೆ ಎಂದು ನಗರ ಸಭೆಯ ಪರಿಸರ ಇಂಜಿನಿಯರ್ ಶ್ರೀ ಧನಂಜಯ ಅಭಿಪ್ರಾಯಿಸಿದರು.

ಪಟ್ಟಣದ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ಸ್ವಚ್ಛತಾ ಮತ್ತು ಪರಿಸರ ಸಂರಕ್ಷಣೆ ಸಮಿತಿಗಳ ವತಿಯಿಂದ ಗಾಂಧಿ ಜಯಂತಿ ಅಂಗವಾಗಿ ಸ್ವಚ್ಛತೆ ಕುರಿತು ಆಯೋಜಿಸಿದ್ದ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಮಾತನಾಡಿದರು.

ಜನರನ್ನು ಕಾಡುವ ಬಹುತೇಕ ಕಾಯಿಲೆಗಳಿಗೆ ಅಶುದ್ಧ ನೀರು, ಕಲುಷಿತ ಪರಿಸರ, ಪ್ಲಾಸ್ಟಿಕ್ ಬಳಕೆ, ಬಯಲು ಶೌಚಾಲಯವೇ ಮುಖ್ಯ ಕಾರಣ. ಇದನ್ನು ಅರಿತು ನಾವು ಸ್ವಚ್ಛತೆಯ ವಿಷಯದಲ್ಲಿ ಜಾಗ್ರತರಾಗಬೇಕಿದೆ. ಸ್ವಚ್ಛತೆ ಹಾಗೂ ಪರಿಸರ ಸಂರಕ್ಷಣೆ ಜನರ ಜೀವನ ಮಟ್ಟವನ್ನು ಸುಧಾರಿಸುವಲ್ಲಿಯೂ ಪ್ರಮುಖ ಪಾತ್ರ ವಹಿಸುತ್ತದೆ. ಪ್ರಸ್ತುತ ನಾಗರೀಕರಾದ ನಾವು ಸ್ವಚ್ಛತೆ ಮತ್ತು ಉತ್ತಮ ಪರಿಸರವನ್ನು ಕಾಯ್ದುಕೊಳ್ಳುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ ಎಂದು ತಿಳಿಸಿದರು.

ಮುಖ್ಯ ಅತಿಥಿಯಾಗಿ ಆಗಮಿಸಿ ಮಾತನಾಡಿದ ಶ್ರೀ ಸುರೇಶ್, ಆಯುಕ್ತರು, ಕೊಳ್ಳೇಗಾಲ ನಗರಸಭಾ ಇವರು ಸ್ವಚ್ಛತೆ ಕಾಪಾಡಿಕೊಳ್ಳುವುದು ತುಂಬಾ ಮುಖ್ಯ. ಸ್ವಚ್ಛತಾ ಅಭಿಯಾನದಡಿಯಲ್ಲಿ ಪ್ರಸ್ತುತ ಹಲವಾರು ಕಾರ್ಯಕ್ರಮಗಳನ್ನು ಎಲ್ಲ ಕಡೆ ನಡೆಸಲಾಗುತ್ತದೆ. ಸ್ವಚ್ಛತೆಯಿಂದ ಉತ್ತಮ ಆರೋಗ್ಯಕರ ಸಮಾಜ ನಿರ್ಮಾಣ ಸಾಧ್ಯ. ಯುವಶಕ್ತಿಯಾದ ತಾವು ಈ ದಿಶೆಯಲ್ಲಿ ಕೈ ಜೊಡಿಸಬೇಕೆಂದು ಕರೆ ನೀಡಿದರು.

ಅಧ್ಯಕ್ಷತೆ ವಹಿಸಿ ಮಾತಾಡಿದ ಪ್ರಾಚಾರ್ಯ ಪ್ರೊ ಉಮೇಶ ಶುಚಿತ್ವವಿದ್ದಲ್ಲಿ ದೈವತ್ವವಿದೆ ಎಂದು ಶತಮಾನದ ಹಿಂದೆಯೇ ಮಹಾತ್ಮ ಗಾಂಧೀಜಿಯವರು ಹೇಳಿದ್ದಾರೆ. ಸ್ವಚ್ಛತೆಯಲ್ಲೂ ದೇವರನ್ನು ಕಂಡವರು ಮಹಾತ್ಮ ಗಾಂಧೀಜಿ. ನೈರ್ಮಲ್ಯ ವ್ಯವಸ್ಥೆಯನ್ನು ಸುಧಾರಿಸುವ ನಿಟ್ಟಿನಲ್ಲಿ ಪ್ರಯತ್ನಗಳು ನಡೆಯುತ್ತಲೇ ಇವೆ. ಬಡತನ, ಅನಕ್ಷರತೆ, ಆರ್ಥಿಕ ಸಂಕಷ್ಟ, ಅರಿವಿನ ಕೊರತೆ, ರೂಢಿಗತ ಅಭ್ಯಾಸಗಳು ಬದಲಾವಣೆಗೆ ಹೊಂದಿಕೊಳ್ಳದ ಮನೋಸ್ಥಿತಿಗಳು, ಹೀಗೆ ಹಲವು ಕಾರಣಗಳು ಇವೆಯಾದರೂ ಅವೆಲ್ಲವನ್ನು ಮೀರಿ ಜನಸಮುದಾಯವು ಸ್ವಚ್ಛತೆಯ ವಿಷಯದಲ್ಲಿ ಕಾಳಜಿ ಹೊಂದಬೇಕಾಗಿದೆ ಎಂದು ಕರೆ ನೀಡಿದರು.

ಪರಿಸರ ಸಂರಕ್ಷಣೆ ಸಮಿತಿ ಸಂಚಾಲಕರಾದ ಶ್ರೀ ಮಂಜುನಾಥ್, ಸದಸ್ಯರಾದ ಶ್ರೀಮತಿ ಆರ್ ಉಮಾದೇವಿ, ಶ್ರೀ ಬಸವದತ್ತ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಶ್ರೀ ಧನಂಜಯ್‌ರವರು ಸ್ವಚ್ಛತೆ ಕುರಿತು ವಿಶೇಷ ಉಪನ್ಯಾಸ ನೀಡುತ್ತಿರುವುದು ಚಿತ್ರದಲ್ಲಿ ಶ್ರೀ ಮಂಜುನಾಥ್, ಸದಸ್ಯರಾದ ಶ್ರೀಮತಿ ಆರ್ ಉಮಾದೇವಿ, ಪ್ರಾಚಾರ್ಯ ಪ್ರೊ ಉಮೇಶ ಹಾಗೂ  ಶ್ರೀ ಸುರೇಶ್, ಬಸವದತ್ತಮಹದೇವಪ್ರಸಾದ್‌ರವರನ್ನು ಕಾಣಬಹುದು




ಶ್ರೀ ಸುರೇಶ್‌ರವರು ಸ್ವಚ್ಛತೆಯಿಂದ ಉತ್ತಮ ಆರೋಗ್ಯಕರ ಸಮಾಜ ನಿರ್ಮಾಣ ಸಾಧ್ಯ ಎಂದು ಕರೆ ನೀಡುತ್ತಿರುವುದು ಚಿತ್ರದಲ್ಲಿ ಶ್ರೀ ಮಂಜುನಾಥ್, ಸದಸ್ಯರಾದ ಶ್ರೀಮತಿ ಆರ್ ಉಮಾದೇವಿ, ಪ್ರಾಚಾರ್ಯ ಪ್ರೊ ಉಮೇಶ ಹಾಗೂ  ಶ್ರೀ ಧನಂಜಯ್, ಬಸವದತ್ತಮಹದೇವಪ್ರಸಾದ್‌ರವರನ್ನು ಕಾಣಬಹುದು



ಪ್ರೊ ಉಮೇಶರವರು ಅಧ್ಯಕ್ಷೀಯ ಭಾಷಣ ನೀಡುತ್ತಿರುವುದು. ಚಿತ್ರದಲ್ಲಿ ಶ್ರೀ ಮಂಜುನಾಥ್, ಸದಸ್ಯರಾದ ಶ್ರೀಮತಿ ಆರ್ ಉಮಾದೇವಿ,  ಶ್ರೀ ಸುರೇಶ್, ಬಸವದತ್ತಮಹದೇವಪ್ರಸಾದ್‌ರವರನ್ನು ಕಾಣಬಹುದು




ವಿಶೇಷ ಉಪನ್ಯಾಸದಲ್ಲಿ ಪಾಲ್ಗೊಂಡಿರುವ ಪತ್ರಕರ್ತರು ಹಾಗೂ ವಿದ್ಯಾರ್ಥಿನಿಯರು



.